



ಕನ್ನಡ ಸಿನಿಮಾಗಳಲ್ಲಿ ಸ್ತ್ರೀಕಥನಗಳಿಗೆ ಮಹತ್ವ ದೊರಕಿಸಿಕೊಟ್ಟ ನಾಯಕಿಯರು: ಎಂ.ವಿ. ರಾಜಮ್ಮ ಹಾಗೂ ಪಂಢರಿಬಾಯಿ

ಕನ್ನಡ ಚಿತ್ರರಂಗಕ್ಕೆ ತೊಂಬತ್ತು ವರ್ಷಗಳು ತುಂಬಲು ಒಂದು ವರ್ಷವಷ್ಟೇ ಉಳಿದಿವೆ. ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ತೆರೆಕಂಡಿದ್ದು 1934ರ ಮಾರ್ಚ್ 3ರಂದು. ಕನ್ನಡದ ಮೊದಲ ಚಲನಚಿತ್ರವೇ ಮಹಿಳಾಪ್ರಧಾನವಾದುದು. 1934ಕ್ಕೂ ಮೊದಲಿನ ಮೂಕಿ ಚಿತ್ರಗಳ ಪರಂಪರೆಯನ್ನು ಗಮನಿಸಿದರೆ, ಆಗ ಕನ್ನಡದಲ್ಲಿದ್ದುದು ಸೂಪರ್ ಸ್ಟಾರಿಣಿಯರೇ ಹೊರತು ಸ್ಟಾರ್‌ಗಳಲ್ಲ! ತಾರಾ ವರ್ಚಸ್ಸಿನ ಪರಂಪರೆ ಕನ್ನಡದಲ್ಲಿ ಆರಂಭವಾದುದು, 'ಸೂರ್ಯ ಸ್ಟಾರ್ಸ್' ಎಂದು ಖ್ಯಾತರಾಗಿದ್ದ ಲಕ್ಷ್ಮೀಬಾಯಿ ಮತ್ತು ಕಮಲಾಬಾಯಿ ಸಹೋದರಿಯರ ಮೂಲಕ. ಕನ್ನಡ ಮೂಕಿಚಿತ್ರಗಳ ಈ ನಾಯಕಿಯರು ಅಪಾರ ಬೇಡಿಕೆ ಹೊಂದಿದ್ದ ಕಲಾವಿದೆಯರು. ಹೀಗೆ, ಕನ್ನಡ ಚಿತ್ರರಂಗದ ಮೊದಲ ಹೆಜ್ಜೆಗಳನ್ನು ನೋಡಿದರೆ, ಅಲ್ಲಿ ಮಹಿಳಾ ಹೆಜ್ಜೆಗಳು ಢಾಳಾಗಿ ಕಾಣಿಸುತ್ತವೆ. ಆದರೆ, ಇದು ಮುನ್ನುಡಿಯ ಸ್ವರೂಪ ಮಾತ್ರ. ನಂತರದ ದಿನಗಳ ಕಥನ ಬೇರೆಯದೇ. ಮಹಿಳಾ ಪ್ರಧಾನವಾಗಿದ್ದ ಚಿತ್ರರಂಗ ನಂತರದ ವರ್ಷಗಳಲ್ಲಿ ಮಹಿಳೆಯನ್ನು ಅಲಂಕಾರಿಕ ಮಾತ್ರವಾಗಿಸಿಕೊಂಡಿತು.

ಪುರುಷ ಪ್ರಧಾನ ಚಿತ್ರರಂಗದಲ್ಲಿ ಎಂ.ವಿ. ರಾಜಮ್ಮ, ಫಂಡರಿಬಾಯಿ ಅವರಂಥ ನಿರ್ಮಾಪಕಿ ಕಂ ನಾಯಕಿಯರು ತಮ್ಮ ಛಾಪು ಉಳಿಸಿದ್ದಾರೆ. ಸರೋಜಾದೇವಿ, ಲೀಲಾವತಿ, ಕಲ್ಪನಾ, ಜಯಂತಿ, ಆರತಿ, ಭಾರತಿ, ಮುಂತಾದ ನಾಯಕಿಯರು ಕೂಡ ತಮ್ಮದೇ ಆದ ಅಸ್ತಿತ್ವ ರೂಪಿಸಿಕೊಂಡು, ಸಿಕ್ಕ ಅವಕಾಶಗಳಲ್ಲೇ ಛಾಪು ಮೂಡಿಸಿದವರು. ಆದರೆ, ಇತ್ತೀಚಿನ ವರ್ಷಗಳಲ್ಲಿ ಹೆಣ್ಣಿನ ಆತ್ಮಾಭಿಮಾನ ಹಾಗೂ ಸ್ವಂತಿಕೆಯನ್ನು ಪ್ರತಿನಿಧಿಸುವ ಸಿನಿಮಾಗಳು ಎಷ್ಟಿವೆ ಎಂದು ಹುಡುಕಿದರೆ ಬೆರಳೆಣಿಕೆಯಷ್ಟು ಉದಾಹರಣೆಗಳೂ ಸಿಗುವುದಿಲ್ಲ. ಅಲ್ಲೊಂದು ಇಲ್ಲೊಂದು ಪ್ರಯೋಗಶೀಲ ಸಿನಿಮಾಗಳಲ್ಲಿ ಹೆಣ್ಣು ಪ್ರಧಾನವಾಗಿ ಕಂಡರೂ, ಕಮರ್ಷಿಯಲ್ ಸಿನಿಮಾಗಳಲ್ಲಿ ಹೆಣ್ಣು ಕರಿಬೇವಿನಂತೆಯೇ ಉಳಿದಿದ್ದಾಳೆ. ನಾಯಕ ನಟನನ್ನು ವಿಜೃಂಭಿಸುವ ಡೈಲಾಗ್, ಸಾಲುಸಾಲು ಫೈಟಿಂಗ್, ರೋಷಾವೇಶದ ಕಥೆಗಳ ನಡುವೆ ಬಂದುಹೋಗುವ ಐದಾರು ಹಾಡುಗಳು, ಆಗೀಗ ಕಾಣಿಸಿಕೊಳ್ಳುವ ನಾಯಕಿ... ಇದೇ ವ್ಯಾಕರಣದಲ್ಲಿ ರೂಪುಗೊಂಡ ಸಾವಿರಾರು ಕಮರ್ಷಿಯಲ್ ಚಿತ್ರಗಳಲ್ಲಿ ಲಿಂಗಸೂಕ್ಷ್ಮತೆಯನ್ನು ಅಪೇಕ್ಷಿಸುವುದೇ ತಪ್ಪು ಎನ್ನುವ ಪರಿಸ್ಥಿತಿಯಿದೆ.

ಹೊಸ ಸಹಸ್ರಮಾನದಲ್ಲಿ– ಮುಖ್ಯವಾಗಿ 2006ರ ನಂತರ– ಕನ್ನಡ ಚಿತ್ರರಂಗಕ್ಕೆ ಹೊಸನೀರಿನ ಹರಿವು ದೊಡ್ಡ ಪ್ರಮಾಣದಲ್ಲಿ ಶುರುವಾಯಿತಷ್ಟೇ. ಆ ಅಬ್ಬರದಲ್ಲಿ ಒಂದಷ್ಟು ಮಹಿಳಾ ಧ್ವನಿಗಳೂ, ಸ್ತ್ರೀಕಥನಗಳೂ ಕಾಣಿಸಿಕೊಂಡವು. ಕವಿತಾ ಲಂಕೇಶ್, ಸುಮನ್ ಕಿತ್ತೂರು ಅವರಂಥ ನಿರ್ದೇಶಕಿಯರು ತಮ್ಮ ಹೆಜ್ಜೆಗುರುತುಗಳನ್ನು ಮೂಡಿಸಿದ್ದು ಹೊಸ ಸಹಸ್ರಮಾನದಲ್ಲೇ. ಶ್ರುತಿ ಹರಿಹರನ್ ಅವರಂಥ ನಟಿ ರೂಪುಗೊಂಡಿದ್ದು ಇತ್ತೀಚಿನ ವರ್ಷಗಳಲ್ಲೇ. 2016ರಲ್ಲಿ ತೆರೆಕಂಡ 'ಕಿರಗೂರಿನ ಗಯ್ಯಾಳಿಗಳು' ಸಿನಿಮಾ ಮಹಿಳಾಧ್ವನಿಯ ಅತ್ಯುತ್ತಮ ಉದಾಹರಣೆ. 2018ರಲ್ಲಿ ತೆರೆಕಂಡ 'ನಾತಿಚರಾಮಿ' ಚಿತ್ರ ಹೆಣ್ಣಿನ ಸ್ವತಂತ್ರ ವ್ಯಕ್ತಿತ್ವವನ್ನು ಗುರ್ತಿಸುವ ಪ್ರಯತ್ನವಾಗಿತ್ತು. 'ಊರ್ವಿ', 'ಯಾನ', 'ಗಂಟುಮೂಟೆ', 'ಬ್ಯೂಟಿಫುಲ್ ಮನಸುಗಳು' ರೀತಿಯ ಸಿನಿಮಾಗಳು ಹೆಣ್ಣಿನ ತವಕತಲ್ಲಣಗಳನ್ನು ಚಿತ್ರಿಸುವ ಪ್ರಯತ್ನಗಳಾಗಿದ್ದವು.

ಕನ್ನಡ ಚಿತ್ರರಂಗ ನಿಧಾನವಾಗಿಯಾದರೂ, ಸಣ್ಣ ಪ್ರಮಾಣದಲ್ಲಾದರೂ ಹೆಣ್ಣಿನ ಧ್ವನಿಯನ್ನು ಒಳಗೊಳ್ಳುತ್ತಿದೆ ಎಂದುಕೊಳ್ಳುತ್ತಿರುವಾಗಲೇ, ಆ ಸಮಾಧಾನ ಮರೀಚಿಕೆ ಎನ್ನುವುದು ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. 'ಮೀ ಟೂ' ಅಭಿಯಾನ, ನಂತರದ ಕೊರೊನಾ ಅಧ್ಯಾಯ, ಕನ್ನಡ ಚಿತ್ರರಂಗದ ಹೊಸ ಪ್ರಯತ್ನಗಳ ಪ್ರಯತ್ನಗಳು ಕ್ಷೀಣಗೊಳ್ಳಲು ಕಾರಣವಾದವು.

'ಮಹಿಳಾ ಪ್ರಧಾನ' ಎಂಬ ಹಣೆಪಟ್ಟಿಯ ಸಿನಿಮಾಗಳನ್ನು ಒಂದೆಡೆಯಿಟ್ಟು, ಸಿನಿಮಾಗಳಲ್ಲಿ ನಟಿಯರ ಪಾತ್ರಕ್ಕಿರುವ ಮನ್ನಣೆ ಕುರಿತು ಯೋಚಿಸಿದರೆ, ಅಲ್ಲೂ ಗಮನಾರ್ಹ



ಸುಮನ್ ಕಿತ್ತೂರು